| ಭಾರತದ ವಿಶ್ವವಿಖ್ಯಾತ ವಿಕಲಾಂಗರು | |
|---|---|
| **ಸುಧಾ ಚಂದ್ರನ್** | ಶಾಸ್ತ್ರೀಯ ನೃತ್ಯಪಟು ಮತ್ತು ಸಿನಿಮಾ ಕಲಾವಿದೆ |
| **ರವೀಂದ್ರ ಜೈನ್** | ಹಿಂದಿ ಸಿನಿಮಾ ಸಂಗೀತ ನಿರ್ದೇಶಕ |
| **ಗಿರೀಶ್ ಶರ್ಮಾ** | ಬ್ಯಾಡ್ಮಿಂಟನ್ ಚಾಂಪಿಯನ್ |
| **ಶೇಖರ್ ನಾಯಕ್** | ಟಿ20 ಕುರುಡರ ವರ್ಲ್ಡ್ ಕಪ್ ಕ್ರಿಕೆಟ್ ಚಾಂಪಿಯನ್ |
| **ರಾಮಕೃಷ್ಣನ್** | ಎಸ್‌ಎಸ್ ಮ್ಯೂಸಿಕ್ ಚಾನಲ್‌ನ ಮುಖ್ಯಸ್ಥ |
| **ಪ್ರೀತಿ ಶ್ರೀನಿವಾಸನ್** | ತಮಿಳುನಾಡಿನ 19 ವರ್ಷದೊಳಗಿನ ಮಹಿಳಾ ಕ್ರಿಕೆಟ್ ತಂಡದ ಕ್ಯಾಪ್ಟನ್ |
| **ಸತ್ಯೇಂದ್ರ ಸಿಂಗ್ವಿ** | ವಿಕಲಾಂಗರ ನೆರವಿನ ರ್ಯಾಂಪ್ ನಿರ್ಮಾತೃ. |
| **ಬಾನಿ ಫೇಸ್ ಪ್ರಭು** | ವೀಲ್ ಚೇರ್ ಟೆನ್ನಿಸ್ ಚಾಂಪಿಯನ್ |
| **ಸಾಯಿಪ್ರಸಾದ್ ವಿಶ್ವನಾಥನ್** | ಸ್ಕೈಡೈವಿಂಗ್ ಎಕ್ಸ್‌ಪರ್ಟ್ |
| **ಅಕ್ಬರ್ ಖಾನ್** | ಸಂಗೀತ ಸ್ಪರ್ಧೆಗಳ ಜಡ್ಜ್ |
| **ಅರುಣಿಮ ಸಿನ್ಹ** | ಮೌಂಟ್ ಎವರೆಸ್ಟ್ ಪರ್ವತಾರೋಹಿ |
| **ಜಾವೇದ್ ಅಬಿದಿ** | ಪತ್ರಕರ್ತ |
| **ರಾಜೇಂದ್ರ ಸಿಂಗ್ ರಹೆಲು** | ಕಾಮನ್ವೆಲ್ತ್ ಗೇಮ್ಸ್ ವೆಯ್ಟ್ ಲಿಫ್ಟಿಂಗ್ ಚಾಂಪಿಯನ್ |
| **ಡಾ.ಸುರೇಶ್ ಅಡ್ವಾನಿ** | ಕ್ಯಾನ್ಸರ್ ತಜ್ಞ ವೈದ್ಯ |
| **ಸಾಧನ ದಂಡ್** | ಫೋಟೊಗ್ರಾಫರ್ ಮತ್ತು ಚಿತ್ರ ಕಲಾವಿದೆ |
| **ಮಾಲತಿ ಹೊಳ್ಳ** | ಪ್ಯಾರಾಲಿಂಪಿಕ್ ಗೋಲ್ಡ್ ಮೆಡಲ್ ವಿಜೇತ ಕ್ರೀಡಾಪಟು |



18. ಕಿವುಡು–ಕುರುಡು ಸಹಿತ ಬಹು ಅಂಗವೈಕಲ್ಯಗಳು
19. ಪಾರ್ಕಿನ್ಸನ್ ಕಾಯಿಲೆ
20. ಸೆರೆಬ್ರಲ್ ಪಾಲ್ಸಿ ಮತ್ತು
21. ಆ್ಯಸಿಡ್ ದಾಳಿಗೆ ಒಳಗಾದವರು.

ರಕ್ತಸಂಬಂಧಿ ರೋಗಗಳು ಮತ್ತು ತಲಸ್ಸೇಮಿಯಾಗಳನ್ನು 2016ರವರೆಗೆ ವಿಕಲಾಂಗತೆಯ ವ್ಯಾಪ್ತಿಯಲ್ಲಿ ಸೇರಿಸಿರಲಿಲ್ಲ. ಕರ್ನಾಟಕ ಹಿಮೊಫೀಲಿಯಾ ಸೊಸೈಟಿ, ಬೇರೆ ರಾಜ್ಯಗಳ ಹಿಮೊಫೀಲಿಯಾ ಚಿಕಿತ್ಸಾ ಸಂಘಟನೆಗಳು, ಹಿಮೊಫೀಲಿಯಾ ರೋಗಿಗಳು ದೆಹಲಿಗೆ ತೆರಳಿ ರಾಷ್ಟ್ರಪತಿ ಭವನದ ಎದುರು ಧರಣಿ ಸತ್ಯಾಗ್ರಹ ಮಾಡಿದರು. ಹಿಮೊಫೀಲಿಯಾ ರೋಗವನ್ನು ಅಂಗವೈಕಲ್ಯಗಳ ಪಟ್ಟಿಗೆ ಸೇರಿಸಬೇಕೆಂದು ಪಟ್ಟುಹಿಡಿದರು. ಆಗ ಕೇಂದ್ರದಲ್ಲಿ ಆರೋಗ್ಯಮಂತ್ರಿಯಾಗಿದ್ದ ಸಚಿವೆ ಮೀರಾ ಕುಮಾರ್, ಸಚಿವ ಸಂಪುಟ ಸಭೆಯಲ್ಲಿ ವಿಷಯ ಮಂಡಿಸಿ, ಸಂಪುಟದ ಒಪ್ಪಿಗೆ ಪಡೆದರು; ಹಿಮೊಫೀಲಿಯಾವನ್ನು ಅಂಗವೈಕಲ್ಯಗಳ ಪಟ್ಟಿಯಲ್ಲಿ ಸೇರಿಸುವ ಏರ್ಪಾಡು ಮಾಡಿದರು. ಆರೋಗ್ಯ ಇಲಾಖೆಯು ತಲಸ್ಸೇಮಿಯಾ ಮತ್ತು ಹಿಮೊಫೀಲಿಯಾಗಳ ಜೊತೆ ಇತರೆ 12 ವೈಕಲ್ಯಗಳನ್ನು ಸೇರಿಸಿ 21 ವಿವಿಧ ಅಂಗವೈಕಲ್ಯಗಳ ಪಟ್ಟಿಯನ್ನು ಬಿಡುಗಡೆ ಮಾಡಿತು. ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳ ಹಕ್ಕುಗಳ ಕಾಯಿದೆಯು 2017ರ ಏಪ್ರಿಲ್ 19ರಂದು ಜಾರಿಗೆ ಬಂತು.

## ಹಾರುವ ಹಕ್ಕಿಗೆ ಏಕೆ ಬಲೆ?

ಐಎಎಸ್–ಐಪಿಎಸ್ ಹುದ್ದೆ ಅಲಂಕರಿಸಿ ಜನರ ಸೇವೆ ಮಾಡಬೇಕೆನ್ನುವ ಪದವೀಧರರು ದೇಶದಲ್ಲಿ ಸಾಕಷ್ಟು ಮಂದಿಯಿದ್ದಾರೆ. ಸಿಕ್ಕ ಅಧಿಕಾರ ಮತ್ತು ಸವಲತ್ತು ಬಳಸಿಕೊಂಡು ಪ್ರಾಮಾಣಿಕವಾಗಿ ದುಡಿದು ಸಾಧನೆ ಮಾಡಿದ ಅನೇಕರು ನಮ್ಮ ನಡುವೆ ಇದ್ದಾರೆ. ಸಿವಿಲ್ ಸರ್ವೀಸ್ ಪರೀಕ್ಷೆಗಳಲ್ಲಿ ಗಳಿಸಿದ ಅಂಕಗಳನ್ನಾಧರಿಸಿ ಆಡಳಿತ, ಪೊಲೀಸ್, ವಿದೇಶಾಂಗ, ರೆವೆನ್ಯೂ ವಿಭಾಗಗಳಲ್ಲಿ ಕೆಲಸ ಪಡೆಯುವ ಅಭ್ಯರ್ಥಿಗಳು ತಾವು ಆಯ್ಕೆ ಮಾಡಿಕೊಂಡ ಕ್ಷೇತ್ರಗಳ ಅಭಿವೃದ್ಧಿಗೆ ಶ್ರಮಿಸುತ್ತಾರೆ. ಆದರೆ ಎಲ್ಲ ಸಾಮಾನ್ಯ ಅಭ್ಯರ್ಥಿಗಳಂತೆ ಪರೀಕ್ಷೆ ಎದುರಿಸಿ ಉನ್ನತ ಶ್ರೇಣಿ ಗಳಿಸಿ ಅಂತಿಮ ಹಂತದ ಸಂದರ್ಶನದಲ್ಲೂ ತೇರ್ಗಡೆಯಾಗಿರುವ ಅಂಗವಿಕಲರು ತಾವು ಬಯಸಿದ ಇಲಾಖೆಯ ಪೋಸ್ಟಿಂಗ್ ಸಿಗದೆ ಪರದಾಡುವಂತಾಗಿದೆ.

ಸಮಸ್ಯೆ ಇರುವುದು ಅಭ್ಯರ್ಥಿಗಳ ಕೆಲಸ ಮಾಡಬಲ್ಲ ಕ್ಷಮತೆ ಪ್ರಮಾಣ ಗುರುತಿಸುವಿಕೆ ಮತ್ತು ಕ್ರಿಯಾತ್ಮಕ ವರ್ಗೀಕರಣದಲ್ಲಿ. ಉದಾಹರಣೆಗೆ, ಎರಡೂ ಕೈ ಕಾಲು ಪೂರ್ಣವಾಗಿ ಇರುವವರು ಭಾರತೀಯ ಆಡಳಿತ ಸೇವೆ, ಸಿವಿಲ್ ಅಕೌಂಟ್ಸ್ ಸೇವೆ, ಇಂಡಿಯನ್ ಇನ್‌ಫಾರ್ಮೇಷನ್ ಗ್ರೂಪ್ ಎ ಮತ್ತು ಗ್ರೂಪ್ ಬಿ ಸೇವೆಗಳಾದ ಡ್ಯಾನಿಕ್ಸ್ (ದೆಹಲಿ ಅಂಡಮಾನ್ ನಿಕೋಬಾರ್ ಆಡಳಿತ) ಮತ್ತು ಪಾಂಡಿಕ್ಸ್ (ಪುದುಚೇರಿಯ ಆಡಳಿತ) ನಡೆಸಲು ಅರ್ಹತೆ ಪಡೆಯುತ್ತಾರೆ. ಇಲ್ಲಿ ಎಲ್ಲೂ ಕೈಕಾಲುಗಳು ಇಷ್ಟೇ ಉದ್ದ ಇರಬೇಕು, ದೇಹದ ಎತ್ತರ ಇಷ್ಟೇ ಇರಬೇಕು ಎಂದು ಹೇಳಿಲ್ಲ. ಅಂಗ ನ್ಯೂನತೆಯ ವರ್ಗೀಕರಣಕ್ಕೂ ಕಾರ್ಯಕ್ಷಮತೆಗೂ ಬೇಕಾದ ದೈಹಿಕ ಸಾಮರ್ಥ್ಯದ ಮಾನದಂಡಗಳಿಗೂ ಸರಿಯಾದ ಹೊಂದಾಣಿಕೆ ಇಲ್ಲದಿರುವುದೇ ಇಷ್ಟೆಲ್ಲ ಸಮಸ್ಯೆಗಳಿಗೆ ಕಾರಣ. ಇರಾ ಸಿಂಘಾಲ್ ಅವರ ಪ್ರಕರಣ

- ಭಾರತದ ಒಟ್ಟು ಜನಸಂಖ್ಯೆಯ ಶೇ. 4.52ರಷ್ಟು ಜನ ತೀವ್ರತರವಾದ ದೈಹಿಕ ಅಥವಾ ಮಾನಸಿಕ ಅಂಗವೈಕಲ್ಯದಿಂದ ಬಳಲುತ್ತಿದ್ದಾರೆ.
- ಜನಸಂಖ್ಯೆಯ ಶೇ. 13.5ರಷ್ಟು ಜನ ಅಂಗವೈಕಲ್ಯ ಹೊಂದಿದ್ದಾರೆ. ಇದರಲ್ಲಿ ಅರ್ಧದಷ್ಟು ಜನ 75 ವಯಸ್ಸು ಮೀರಿದವರಿದ್ದಾರೆ.